ಸುವರ್ಣ ಕರ್ನಾಟಕ ಪ್ರಶಸ್ತಿ ಪುರಸ್ಕೃತ SAMYUKTA KARNATAKA
ಸಂಯುಕ್ತ ಕರ್ನಾಟಕ
ಕನ್ನಡಿಗರ ಸಾಕ್ಷಿಪ್ರಜ್ಞೆ
ಶತಕದತ್ತ ಓಟ... ತೊಂಬತ್ತರ ನೋಟ

# ವಾಲಿಬಾಲ್ ಕ್ರೀಡಾಕೂಟಕ್ಕೆ ಚಾಲನೆ

**ಸಂ.ಕ.ಸಮಾಚಾರ ಬಸವಕಲ್ಯಾಣ**

ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಎರಡು ದಿನಗಳ ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜು ವಾಲಿಬಾಲ್ ಕ್ರೀಡಾಕೂಟಕ್ಕೆ ವಿಟಿಯು ಕಲಬುರಗಿ ಪ್ರಾದೇಶಿಕ ನಿರ್ದೇಶಕ ಡಾ. ಶಂಭುಲಿಂಗಪ್ಪಾ ಚಾಲನೆ ನೀಡಿದರು. ಮಾನಸಿಕ ಮತ್ತು ದೈಹಿಕ ಸಧೃಡತೆಗೆ ಕ್ರಿಡೆಗಳು ಸಹಕಾರಿಯಾಗಿದ್ದು, ಶಾಲಾ, ಕಾಲೇಜುಗಳ ಮಟ್ಟದಲ್ಲಿ ನಡೆಯುವ ಕ್ರಿಡಾಕೂಟದಲ್ಲಿ ವಿದ್ಯಾರ್ಥಿಗಳ ಸಕ್ರಿಯಾವಾಗಿ ಪಾಲ್ಗೊಳ್ಳಬೇಕು ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮಾ ಎಂ. ತಾಳಂಪಳ್ಳಿ ಮಾತನಾಡಿ, ಗ್ರಾಮೀಣ ಭಾಗದ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣದ ಜತೆಗೆ ಕ್ರೀಡೆಗೆ ಬೇಕಾದ ಸೌಲಭ್ಯಗಳನ್ನು ಸಹ ಬಿಇಟಿಯಿಂದ ಒದಗಿಸಲಾಗುವದು ಎಂದು ಹೇಳಿದರು.



**ಬಸವಕಲ್ಯಾಣ: ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಿದ ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜುಗಳ ವಾಲಿಬಾಲ್ ಕ್ರೀಡಾಕೂಟನ್ನು ಡಾ. ಶಂಭುಲಿಂಗಪ್ಪಾ ಉದಾಟ್ಘಿಸಿದರು.**

ಪ್ರಾಚಾರ್ಯ ಡಾ. ಅಶೋಕ ಕುಮಾರ ವಣಗೇರಿ ಪ್ರಾಸ್ತಾವಿಕ ನುಡಿಗಳನ್ನಾಡಿದರು, ಉಪಪ್ರಾಚಾರ್ಯ ಡಾ. ಅರುಣಕುಮಾರ ಯಲಾಲ್, ರಜಿಸ್ಟರ್ ಪ್ರೇಮಸಾಗರ ಪಾಟೀಲ, ಮುಖ್ಯಸ್ಥ ಡಾ. ಅನೀಲ ಪಾಟೀಲ, ಡಾ. ಸುದರ್ಶನ ಎಂ, ಡಾ. ಸಂಜೀವಕುಮಾರ ಜಲ್ದೆ, ಗುರುರಾಜ ಪಿ. ಖಂಡೋಬಾ ಆರ್, ಕಚೇರಿ ಅಧಿಕ್ಷಕ ವೃಷೀಕೇತ ಭೂಸಾರೆ, ಪಿಆರ್‌ಓ ಶಂಕರ ಆಗರಗಿ, ದತ್ತಣ್ಣಾ ಮಂಟಗೆ ಉಪಸ್ಥಿತರಿದ್ದರು. ವಿವಿಧ ಕಾಲೇಜುಗಳ ಪ್ರಾಚಾರ್ಯರಾದ ಡಾ. ನಾಗಯ್ಯಾ ಸ್ವಾಮಿ, ವಿಶ್ವನಾಥಯ್ಯಾ ಸ್ವಾಮಿ, ನೀಲಕಂಠ ಕೋಡ್ಲೆ, ಹಾಗೂ ಶಿವಕುಮಾರ ಸ್ವಾಮಿ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ವಿದ್ಯಾಸಾಗರ ಮೂಲಗೆ ನಿರೂಪಿಸಿದರು, ದತ್ತಣ್ಣಾ ಮಂಟಗೆ ವಂದಿಸಿದರು.

Kalaburgi Edition
Apr 23, 2025 Page No. 11
Powered by: erelego.com

ಪ್ರಜಾವಾಣಿ

# ‘ಕ್ರೀಡೆಯಿಂದ ಕ್ರೀಯಾಶೀಲತೆ ಹೆಚ್ಚಳ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ: ‘ಕ್ರೀಡೆಗಳಲ್ಲಿ ಪಾಲ್ಗೊಳ್ಳುವುದರಿಂದ ವ್ಯಕ್ತಿ ಇನ್ನಷ್ಟು ಕ್ರೀಯಾಶೀಲ ಆಗುತ್ತಾನೆ’ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಪ್ರಾದೇಶಿಕ ನಿರ್ದೇಶಕ ಶಂಭುಲಿಂಗಪ್ಪ ಹೇಳಿದರು.

ನಗರದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ಅಂತರಕಾಲೇಜು ವಾಲಿಬಾಲ್ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಪಾಠದೊಂದಿಗೆ ಆಟ, ವ್ಯಾಯಾಮ ಅಗತ್ಯವಾಗಿದ್ದು ಇದರಿಂದ ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯ ಲಭಿಸುತ್ತದೆ’ ಎಂದರು.

ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ತಾಳಂಪಳ್ಳಿ ಮಾತನಾಡಿ, ‘ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆಯುವಂತೆ ಕ್ರೀಡೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ ಕಾಲೇಜಿಗೆ ಮತ್ತು ನಾಡಿಗೆ ಕೀರ್ತಿ ತರಬೇಕು’ ಎಂದು ಸಲಹೆ ನೀಡಿದರು.

ಪ್ರಾಚಾರ್ಯ ಅಶೋಕಕುಮಾರ ವಣಗೇರಿ ಮಾತನಾಡಿ, ‘ಈಚೆಗೆ ವಿದ್ಯಾಭ್ಯಾಸಕ್ಕೆ ಮಹತ್ವ ನೀಡಲಾಗುತ್ತಿದೆ. ಕ್ರೀಡೆಯನ್ನು ಕಡೆಗಣಿಸುತ್ತಿರುವ ಕಾರಣ ನಾನಾ ರೋಗಗಳಿಗೆ ತುತ್ತಾಗಬೇಕಾಗುತ್ತಿರುವುದು ವಿಪರ್ಯಾಸ’ ಎಂದರು.

ವಿದ್ಯಾಸಾಗರ ಮೂಲಗೆ, ದತ್ತಣ್ಣ ಮಂಟಗೆ ಮಾತನಾಡಿದರು.

ಉಪ ಪ್ರಾಚಾರ್ಯ ಅರುಣಕುಮಾರ ಯಲಾಲ್, ವಿವಿಧ ವಿಭಾಗಗಳ ಮುಖ್ಯಸ್ಥರಾದ ಅನಿಲ ಪಾಟೀಲ, ಸುದರ್ಶನ, ಸಂಜೀವಕುಮಾರ ಜಲ್ದೆ, ಗುರುರಾಜ ಖಂಡೋಬಾ, ಪ್ರೇಮಸಾಗರ ಪಾಟೀಲ, ವೃಷಿಕೇತ್ ಭೂಸಾರೆ, ಶಂಕರ ಆಗರಗಿ, ನಾಗಯ್ಯ ಸ್ವಾಮಿ, ವಿಶ್ವನಾಥಯ್ಯ, ನೀಲಕಂಠ ಕೊಡ್ಲೆ, ಶಿವಕುಮಾರ ಸ್ವಾಮಿ ಉಪಸ್ಥಿತರಿದ್ದರು.



ಬಸವಕಲ್ಯಾಣದ ಬಿಇಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ಅಂತರಕಾಲೇಜು ವಾಲಿಬಾಲ್ ಕ್ರೀಡಾಕೂಟವನ್ನು ಪ್ರಾದೇಶಿಕ ನಿರ್ದೇಶಕ ಶಂಭುಲಿಂಗಪ್ಪ ಉದ್ಘಾಟಿಸಿದರು

ಡಾ.ಶಂಭುಲಿಂಗಪ್ಪ ಅನಿಸಿಕೆ | ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಾಲಿಬಾಲ್ ಕ್ರೀಡಾಕೂಟ

# ದೈಹಿಕ ಸದೃಢತೆ ಜತೆಗೆ ಕ್ರಿಯಾಶೀಲತೆಗೆ ಕ್ರೀಡೆ ಸಹಕಾರಿ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಕ್ರೀಡೆಗಳು ನಮ್ಮನ್ನು ದೈಹಿಕವಾಗಿ ಸದೃಢರನ್ನಾಗಿ ಮಾಡುವುದು ಜತೆಗೆ ನಮ್ಮನ್ನು ಕ್ರಿಯಾಶೀಲರನ್ನಾಗಿಸುತ್ತವೆ. ಹೀಗಾಗಿ ಆರೋಗ್ಯಪೂರ್ಣ ಬದುಕಿಗೆ ಕ್ರೀಡೆಗಳು ಪೂರಕ ಎಂದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕಲಬುರಗಿ ಪ್ರಾದೇಶಿಕ ನಿರ್ದೇಶಕ ಡಾ. ಶಂಭುಲಿಂಗಪ್ಪ ಹೇಳಿದರು.

ಬಿಇಟಿಯ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ಎರಡು ದಿನಗಳ ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜುಗಳ ವಾಲಿಬಾಲ್ ಕ್ರೀಡಾಕೂಟನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಕೂಟದಲ್ಲಿ ಜಯಗಳಿಸಿ ಕಾಲೇಜಿಗೆ, ರಾಜ್ಯಕ್ಕೆ, ದೇಶಕ್ಕೆ ಕೀರ್ತಿ ತರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ಎಂ. ತಾಳಂಪಳ್ಳಿ ಮಾತನಾಡಿ, ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿಡುವಲ್ಲಿ ಕ್ರೀಡೆ ಪ್ರಮುಖ ಪಾತ್ರ ವಹಿಸುತ್ತದೆ. ಕ್ರೀಡೆಗಳಲ್ಲಿ ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಗುಣಮಟ್ಟದ ಶಿಕ್ಷಣದ ಜತೆಗೆ ಕ್ರೀಡೆಗೆ ಬೇಕಾದ ಸೌಲಭ್ಯಗಳನ್ನು ಸಹ ಬಿಇಟಿ ಸಂಸ್ಥೆಯ ವತಿಯಿಂದ ಒದಗಿಸಲಾಗುವುದು ಎಂದು ತಿಳಿಸಿದರು.

ಪ್ರಾಚಾರ್ಯ ಡಾ.ಅಶೋಕಕುಮಾರ ವಣಗೇರಿ ಸ್ವಾಗತಿಸಿ, ಪ್ರಾಸ್ತಾವಿಕ ಮಾತನಾಡಿ, ಕ್ರೀಡೆ ಜೀವನದ ಏಳಿಗೆಗಾಗಿ ಅತ್ಯಾವಶ್ಯಕವಾಗಿದೆ. ಮಾಸಿಕವಾಗಿ ಗಟ್ಟಿಯಾಗಿ ಬೆಳೆಯಲು ಕ್ರೀಡೆ ಸಹಕಾರಿಯಾಗಿದ್ದು, ಅಭ್ಯಾಸದ ಜತೆಗೆ ಕ್ರೀಡೆಗಳಲ್ಲಿಯೂ ಆಸಕ್ತಿಯಿಂದ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು.

ಉಪಪ್ರಾಚಾರ್ಯ ಡಾ.ಅರುಣಕುಮಾರ ಯಲಾಲ್, ರಜಿಸ್ಟರ್ ಪ್ರೇಮಸಾಗರ ಪಾಟೀಲ, ವಿಭಾಗದ ಮುಖ್ಯಸ್ಥರಾದ ಡಾ.ಅನೀಲ ಪಾಟೀಲ, ಡಾ.ಸುದರ್ಶನ ಎಂ., ಡಾ.ಸಂಜೀವಕುಮಾರ ಜಲ್ದೆ, ಗುರುರಾಜ ಖಂಡೋಬಾ ಆರ್., ಕಚೇರಿ ಅಧೀಕ್ಷಕ ವೃಷಿಕೇತ ಭೂಸಾರೆ, ಪಿಆರ್‌ಒ ಶಂಕರ ಆಗರಗಿ, ದತ್ತಣ್ಣ ಮಂಟಗೆ, ವಿವಿಧ ಕಾಲೇಜುಗಳ ಪ್ರಾಚಾರ್ಯರಾದ ಡಾ.ನಾಗಯ್ಯ ಸ್ವಾಮಿ, ವಿಶ್ವನಾಥಯ್ಯಸ್ವಾಮಿ, ನೀಲಕಂಠ ಕೋಡ್ಲೆ ಹಾಗೂ ಶಿವಕುಮಾರ ಸ್ವಾಮಿ ಇತರರಿದ್ದರು. ವಿದ್ಯಾಸಾಗರ ಮೂಲಗೆ ನಿರೂಪಣೆ ಮಾಡಿದರು. ದತ್ತಣ್ಣ ಮಂಟಗೆ ವಂದಿಸಿದರು.




ವಿಜಯವಾಣಿ ಚಿತ್ರ

ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಆವರಣದಲ್ಲಿ ಮಂಗಳವಾರ ಆಯೋಜಿಸಿದ್ದ ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜುಗಳ ವಾಲಿಬಾಲ್ ಕ್ರೀಡಾಕೂಟನ್ನು ಡಾ.ಶಂಭುಲಿಂಗಪ್ಪ ಉದ್ಘಾಸಿದರು. ಮಲ್ಲಮ್ಮ ಎಂ.ತಾಳಂಪಳ್ಳಿ, ಡಾ.ಅಶೋಕಕುಮಾರ ವಣಗೇರಿ, ಡಾ.ಅರುಣಕುಮಾರ ಯಲಾಲ್, ಪ್ರೇಮಸಾಗರ ಪಾಟೀಲ, ಡಾ.ಸುದರ್ಶನ ಎಂ., ಶಿವಕುಮಾರ ಸ್ವಾಮಿ ಇದ್ದರು.


Vijayavani.Net VijayavaniDigital VijayavaniDigital VijayavaniDigital


# ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜು ಗಳ ವಾಲಿಬಾಲ ಕ್ರೀಡಾಕೂಟಗಳು

ವರದಿ:ವೀರಶೆಟ್ಟಿ.ಮಲಶೆಟ್ಟಿ

ಬಸವಕಲ್ಯಾಣ: ನಗರದ ಇಂಜಿನೀಯರಿಂಗ ಕಾಲೇಜಿನ ಆವರಣದಲ್ಲಿ ದಿ: 22/ ರಿಂದ 23/ 04/2025 ರ ವರೆಗೆ ನಡೆಯುತ್ತಿರುವ ಕಾರಣ ವಿಟಿಯು ಕಲಬುರಗಿ ಪ್ರಾದೇಶಿಕ ನಿರ್ದೇಶಕ ರಾದ ಡಾ:ಶಂಭುಲಿಂಗಪ್ಪಾ ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ಕ್ರೀಡೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಕ್ರೀಡೆಗಳು ನಮ್ಮನ್ನು ದೈಹಿಕವಾಗಿ ಸದೃಢರ ನ್ನಾಗಿ ಮಾಡುವುದು ಮಾತ್ರ ವಲ್ಲದೇ ಅದು ನಮ್ಮನ್ನು ಕ್ರೀಯಾಶಿಲರನ್ನಾಗಿಸುತ್ತದೆ ಕ್ರೀಡಾಕೂಟದಲ್ಲಿ ಜಯಗಳಿಸಿ ಕಾಲೇಜಿಗೆ, ರಾಜ್ಯಕ್ಕೆ, ದೇಶಕ್ಕೆ ಕೀರ್ತಿ ತರಬೇಕು ಎಂದು ಹೇಳಿದರು.

ಬಸವಕಲ್ಯಾಣ ಇಂಜಿನೀಯರಿಂಗ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಮ್ಮಾ ಎಂ.ತಾಳ 'ಂಪಳ್ಳಿ ಯವರು ಸಮಾರಂಭದ ಅಧ್ಯಕ್ಷತೆ ವಹಿಸಿ,ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿಡುವಲ್ಲಿ ಕ್ರೀಡೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಕ್ರೀಡಾಕೂಟದಲ್ಲಿ ಯಶಸ್ವಿ ಯಾಗಿ ಜಯಗಳಿಸಿ ರಾಜ್ಯ ಮಟ್ಟಕ್ಕೆ ಕೀರ್ತಿ ತರಬೇಕು ಎಂದು ಹೇಳಿದರು ಮತ್ತು ಬಿಇಟಿ ಸಂಸ್ಥೆಯ ವತಿಯಿಂದ ಶಿಕ್ಷಣ ಜೊತೆ-ಜೊತೆಗೆ ಕ್ರೀಡೆಗೆ ಬೇಕಾಗುವ ಇನ್ನು ಹೆಚ್ಚಿನ ರೀತಿಯ ಸವಲತ್ತುಗಳು ಒದಗಿಸುತ್ತೇವೆ ಎಂದು ಹೇಳಿದರು.




ಕಾಲೇಜಿನ ನಿರ್ದೇಶಕರು ಹಾಗೂ ಪ್ರಾಚಾರ್ಯರಾದ ಡಾ:ಅಶೋಕಕುಮಾರ ವಣಗೇರಿಯವರು ಎಲ್ಲರನ್ನ ಸ್ವಾಗತಿಸಿ,ಕ್ರೀಡೆ ಜೀವನದ ಏಳಿಗೆಗಾಗಿ ಬಹಳ ಅತೀ ಅವಶ್ಯಕವಾಗಿದೆ. ಕ್ರೀಡೆ ಹಾಗೂ ಕ್ರೀಡೆಗಳ ಜೊತೆ-ಜೊತೆಗೆ ವಿದ್ಯಾಭ್ಯಾಸ ಮಾಡಿದರೆ ಮಾನಸಿಕವಾಗಿ ಗಟ್ಟಿಯಾಗಿ ಬೆಳೆಯುತ್ತಾರೆ. ವಿದ್ಯಾರ್ಥಿಗಳಿಗೆ ಕ್ರೀಡೆ ಬಹಳ ಮುಖ್ಯವಾದ ಚಟುವಟಿಕೆಯಾಗಿದೆ ಎಂದು ಹೇಳಿದರು.

ಬಸವಕಲ್ಯಾಣ ಇಂಜಿನೀಯರಿಂಗ್ ಕಾಲೇಜಿನ ಉಪಪ್ರಾಚಾರ್ಯರು ಆದ ಡಾ: ಅರುಣಕುಮಾರ ಯಲಾಲ್, ವಿಭಾಗದ ಮುಖ್ಯಸ್ಥರಾದ ಡಾ: ಅನೀಲ ಪಾಟಿಲ,ಡಾ: ಸುದರ್ಶನ ಎಂ.ಡಾ:ಸ 'ಂಜೀವ ಕುಮಾರ ಜಲ್ದೆ,ಗುರುರಾಜ ಪಿ.ಖಂಡೋಬ ಆರ. ಪ್ರೇಮಸಾಗರ ಪಾಟೀಲ, ವೃಷೀಕೇತ ಭೂಸಾರೆ,ಶಂಕರ ಆಗರಗಿ, ದತ್ತಣ್ಣಾ ಮಂಟಗೆ ಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಬಿಇಟಿ ಸಂಸ್ಥೆ ಯಡಿಯಲ್ಲಿರುವ ವಿವಿಧ ಕಾಲೇಜ ಪ್ರಾಚಾರ್ಯರು , ಡಾ: ನಾಗಯ್ಯಾ ಸ್ವಾಮಿ, ವಿಶ್ವನಾಥಯ್ಯಾ ಸ್ವಾಮಿ, ನೀಲಕಂಠ ಕೋಡ್ಲೆ, ಹಾಗೂ ಶಿವಕುಮಾರ ಸ್ವಾಮಿ, ಎಲ್ಲಾ ಕಾಲೇಜಿನ ಶಿಕ್ಷಕ-ಶಿಕ್ಷಕೇತರರು ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.ಈ ಸಂದರ್ಭದಲ್ಲಿ ವಿದ್ಯಾಸಾಗರ ಮೂಲಗೆ ನಿರೂಪಿಸಿ ದತ್ತಣ್ಣಾ ಮಂಟಗೆ ವಂದಿಸಿದರು.

# ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜ ವಾಲಿಬಾಲ ಕ್ರೀಡಾಕೂಟ

ವರದಿ: ವೀರಶೆಟ್ಟಿ ಮಲಶೆಟ್ಟಿ




ಭಾರತ ವೈಭವ ಸುದ್ದಿ
**ಬಸವಕಲ್ಯಾಣ:** ನಗರದ ಇಂಜಿನೀಯರಿಂಗ ಕಾಲೇಜಿನ ಆವರಣದಲ್ಲಿ ದಿ ೨೨/ ರಿಂದ ೨೩/ ೦೪/೨೦೨೫ ರ ವರೆಗೆ ನಡೆಯುತ್ತಿರುವ ಕಾರಣ ವಿಟಿಯು ಕಲಬುರಗಿ ಪ್ರಾದೇಶಿಕ ನಿರ್ದೇಶಕ ರಾದ ಡಾ:ಶಂಭುಲಿಂಗಪ್ಪಾ ರವರು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟನೆ ಮಾಡಿ ಕ್ರೀಡೆಗೆ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ಕ್ರೀಡೆಗಳು ನಮ್ಮನ್ನು ದೈಹಿಕವಾಗಿ ಸದೃಢರನ್ನಾಗಿ ಮಾಡುವುದು ಮಾತ್ರ ವಲ್ಲದೇ ಅದು ನಮ್ಮನ್ನು ಕ್ರೀಯಾ ಶಿಲರನ್ನಾಗಿಸುತ್ತದೆ ಕ್ರೀಡಾಕೂಟದಲ್ಲಿ ಜಯಗಳಿಸಿ ಕಾಲೇಜಿಗೆ, ರಾಜ್ಯಕ್ಕೆ, ದೇಶಕ್ಕೆ ಕೀರ್ತಿ ತರಬೇಕು ಎಂದು ಹೇಳಿದರು. ಬಸವಕಲ್ಯಾಣ ಇಂಜಿನೀಯರಿಂಗ ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಮಲ್ಲಮ್ಮಾ ಎಂ. ತಾಳಂಪಳ್ಳಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿ, ಒಬ್ಬ ವ್ಯಕ್ತಿಯನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ಆರೋಗ್ಯವಾಗಿಡುವಲ್ಲಿ ಕ್ರೀಡೆಯು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಈ ಕ್ರೀಡಾಕೂಟದಲ್ಲಿ ಯಶಸ್ವಿಯಾಗಿ ಜಯಗಳಿಸಿ ರಾಜ್ಯ ಮಟ್ಟಕ್ಕೆ ಕೀರ್ತಿ ತರಬೇಕು ಎಂದು ಹೇಳಿದರು ಮತ್ತು ಬಿಇಟಿ ಸಂಸ್ಥೆಯ ವತಿಯಿಂದ ಶಿಕ್ಷಣ ಜೊತೆ-ಜೊತೆಗೆ ಕ್ರೀಡೆಗೆ ಬೇಕಾಗುವ ಇನ್ನು ಹೆಚ್ಚಿನ ರೀತಿಯ ಸವಲತ್ತುಗಳು ಒದಗಿಸುತ್ತೇವೆ ಎಂದು ಹೇಳಿದರು.

ಕಾಲೇಜಿನ ನಿರ್ದೇಶಕರು ಹಾಗೂ ಪ್ರಾಚಾರ್ಯರಾದ ಡಾ:ಅಶೋಕಕುಮಾರ ವಣಗೇರಿಯವರು ಎಲ್ಲರನ್ನ ಸ್ವಾಗತಿಸಿ, ಕ್ರೀಡೆ ಜೀವನದ ಏಳಿಗೆಗಾಗಿ ಬಹಳ ಅತೀ ಅವಶ್ಯಕವಾಗಿದೆ. ಕ್ರೀಡೆ ಹಾಗೂ ಕ್ರೀಡೆಗಳ ಜೊತೆ-ಜೊತೆಗೆ ವಿದ್ಯಾಭ್ಯಾಸ ಮಾಡಿದರೆ ಮಾನಸಿಕವಾಗಿ ಗಟ್ಟಿಯಾಗಿ ಬೆಳೆಯುತ್ತಾರೆ. ವಿದ್ಯಾರ್ಥಿಗಳಿಗೆ ಕ್ರೀಡೆ ಬಹಳ ಮುಖ್ಯವಾದ ಚಟುವಟಿಕೆಯಾಗಿದೆ ಎಂದು ಹೇಳಿದರು.

ಬಸವಕಲ್ಯಾಣ ಇಂಜಿನೀಯರಿಂಗ್ ಕಾಲೇಜಿನ ಉಪಪ್ರಾಚಾರ್ಯರು ಆದ ಡಾ ಅರುಣಕುಮಾರ ಯಲಾಲ್, ವಿಭಾಗದ ಮುಖ್ಯಸ್ಥರಾದ ಡಾ ಅನೀಲ ಪಾಟಿಲ, ಡಾ:ಸುದರ್ಶನ ಎಂ. ಡಾ:ಸಂಜೀವಕುಮಾರ ಜಲ್ದೆ, ಗುರುರಾಜ ಪಿ. ಖಂಡೋಬ ಆರ. ಪ್ರೇಮಸಾಗರ ಪಾಟೀಲ, ವೃಷೀಕೇತ ಭೂಸಾರೆ, ಶಂಕರ ಆಗರಗಿ, ದತ್ತಣ್ಣಾ ಮಂಟಗೆ ಯವರು ವೇದಿಕೆಯ ಮೇಲೆ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಬಿಇಟಿ ಸಂಸ್ಥೆ ಯಡಿಯಲ್ಲಿರುವ ವಿವಿಧ ಕಾಲೇಜ ಪ್ರಾಚಾರ್ಯರು , ಡಾ ನಾಗಯ್ಯಾ ಸ್ವಾಮಿ, ವಿಶ್ವನಾಥಯ್ಯಾ ಸ್ವಾಮಿ, ನೀಲಕಂಠ ಕೋಡ್ಲೆ, ಹಾಗೂ ಶಿವಕುಮಾರ ಸ್ವಾಮಿ, ಎಲ್ಲಾ ಕಾಲೇಜಿನ ಶಿಕ್ಷಕ-ಶಿಕ್ಷಕೇತರರು ಮತ್ತು ವಿದ್ಯಾ ರ್ಥಿ-ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು. ಈ ಸಂದರ್ಭದಲ್ಲಿ ವಿದ್ಯಾಸಾಗರ ಮೂಲಗೆ ನಿರೂಪಿಸಿ ದತ್ತಣ್ಣಾ ಮಂಟಗೆ ವಂದಿಸಿದರು.

---

## ಕಲಬುರಗಿ ವಲಯದ ಅಂತರ ಕಾಲೇಜುಗಳ ವಾಲಿಬಾಲ್ ಕ್ರೀಡಾಕೂಟಕ್ಕೆ ಚಾಲನೆ

# ಕ್ರೀಡೆಯಿಂದ ದೈಹಿಕ ಸಾಮರ್ಥ್ಯ ವೃದ್ಧಿ




**ಬಸವಕಲ್ಯಾಣದ ರಾಷ್ಟ್ರೀಯ ಹೆದ್ದಾರಿ ಬಳಿಯ ಬಿಇಟಿ ಕಾಲೇಜಿನ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಟಿಯು ಕಲಬುರಗಿ ವಲಯದ ಅಂತರ ಕಾಲೇಜು ವಾಲಿಬಾಲ್ ಕ್ರೀಡಾಕೂಟಕ್ಕೆ ಚಾಲನೆ ನೀಡಲಾಯಿತು.**

■ **ವಿಕ ಸುದ್ದಿಲೋಕ** ಬಸವಕಲ್ಯಾಣ
ಕ್ರೀಡೆಯಿಂದ ದೈಹಿಕ ಸಾಮರ್ಥ್ಯ ವೃದ್ಧಿ ಜತೆಗೆ ಶಾರರೀಕ ಶಕ್ತಿ ಹೆಚ್ಚಳವಾಗಲಿದೆ ಎಂದು ಕಲಬುರಗಿ ಪ್ರಾದೇಶಿಕ ನಿರ್ದೇಶಕ ಡಾ. ಶಂಭುಲಿಂಗಪ್ಪ ಹೇಳಿದರು.

ನಗರದ ರಾಷ್ಟ್ರೀಯ ಹೆದ್ದಾರಿ ಬಳಿಯ ಬಿಇಟಿ ಕಾಲೇಜಿನ ಆವರಣದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ವಿಟಿಯು ಕಲಬುರಗಿ ವಲಯದ ಆಂತರ ಕಾಲೇಜು ವಾಲಿಬಾಲ್ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಮಾತನಾಡಿದರು.

ಕ್ರೀಡೆಗಳು ನಮ್ಮನ್ನು ದೈಹಿಕವಾಗಿ ಸದೃಢರನ್ನಾಗಿ ಮಾಡುವುದು ಮಾತ್ರವಲ್ಲದೇ ಅದು ಕ್ರಿಯಾಶೀಲರನ್ನಾಗಿಸುತ್ತದೆ ಎಂದರು.

ಕಾಲೇಜಿನ ಆಡಳಿತ ಮಂಡಳಿಯ ಸದಸ್ಯೆ ಮಲ್ಲಮ್ಮಾ ಎಂ. ತಾಳಂಪಳ್ಳಿ ಆಧ್ಯಕ್ಷತೆ ವಹಿಸಿ ಮಾತನಾಡಿ, ಒಬ್ಬ ವ್ಯಕ್ತಿಯನ್ನು ದೈಹಿಕ ಮತ್ತು ಮಾನಸಿಕವಾಗಿ ಆರೋಗ್ಯವಾಗಿಸಲು ಕ್ರೀಡೆಯು ಬಹಳ ಪ್ರಮುಖ ಪಾತ್ರ ವಹಿಸುತ್ತದೆ. ಕ್ರೀಡಾಕೂಟದಲ್ಲಿ ಯಶಸ್ವಿಯಾಗಿ ಜಯ ಗಳಿಸಿ ಕಾಲೇಜಿಗೆ ಕೀರ್ತಿ ತರಬೇಕು ಎಂದು ಹೇಳಿದರು.

ಪ್ರಾಚಾರ್ಯ ಡಾ.ಅಶೋಕಕುಮಾರ ವಣಗೇರಿ ಮಾತನಾಡಿ, ಕ್ರೀಡೆ ಜೀವನದ ಏಳಿಗೆಗಾಗಿ ಬಹಳ ಅತೀ ಆವಶ್ಯಕವಾಗಿದೆ. ಕ್ರೀಡೆ ಹಾಗೂ ಕ್ರೀಡೆಗಳ ಜತೆಗೆ ವಿದ್ಯಾಭ್ಯಾಸ ಮಾಡಿದರೆ ಮಾನಸಿಕವಾಗಿ ಗಟ್ಟಿಯಾಗಿ ಬೆಳೆಯುತ್ತಾರೆ. ವಿದ್ಯಾರ್ಥಿಗಳಿಗೆ ಕ್ರೀಡೆ ಬಹಳ ಮುಖ್ಯವಾದ ಚಟುವಟಿಕೆಯಾಗಿದೆ ಎಂದರು.

ಉಪ ಪ್ರಾಚಾರ್ಯರು ಡಾ. ಆರುಣಕುಮಾರ ಯಲಾಲ್, ವಿಭಾಗದ ಮುಖ್ಯಸ್ಥ ಡಾ.ಆನಿಲ್ ಪಾಟೀಲ, ಡಾ. ಸುದರ್ಶನ ಎಂ., ಡಾ. ಸಂಜೀವಕುಮಾರ ಜಲ್ದೆ, ಗುರುರಾಜ ಪಿ. ಖಂಡೋಬಾ ಆರ್., ಪ್ರೇಮಸಾಗರ ಪಾಟೀಲ, ವೃಷೀಕೇತ ಭೂಸಾರೆ, ಶಂಕರ ಆಗರಗಿ, ದತ್ತಣ್ಣಾ ಮಂಟಗೆ ಇತರರಿದ್ದರು. ವಿದ್ಯಾಸಾಗರ ಮೂಲಗೆ ನಿರೂಪಿಸಿದರು. ದತ್ತಣ್ಣಾ ಮಂಟಗೆ ವಂದಿಸಿದರು.

ಬಿಇಟಿ ಸಂಸ್ಥೆಯಡಿ ವಿವಿಧ ಕಾಲೇಜುಗಳ ಪ್ರಾಚಾರ್ಯರಾದ ಡಾ.ನಾಗಯ್ಯ ಸ್ವಾಮಿ, ವಿಶ್ವನಾಥಯ್ಯಾ ಸ್ವಾಮಿ, ನೀಲಕಂಠ ಕೋಡ್ಲೆ, ಶಿವಕುಮಾರ ಸ್ವಾಮಿ, ಶಿಕ್ಷಕ-ಶಿಕ್ಷಕೇತರರು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.